ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 4, January-February, 2024, Pp. 46-54.
©*IIMRD*, Mysuru
IIMRD JOURNALS
www.iimrd.com

ಇಪ್ಪತ್ತೈದು ವರ್ಷಗಳಲ್ಲಿ ಚಾಮರಾಜನಗರ ಜಿಲ್ಲೆಯ ಅಭಿವೃದ್ಧಿಯ ಸುತ್ತ ಒಂದು ಹೆಜ್ಜೆ

ನವೀನ ಎಸ್.ಎಂ.[1] ಮತ್ತು ಪ್ರೊ.ಜೆ.ಸೋಮಶೇಖರ್[2]
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು
ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು.

ಸಾರಾಂಶ: (Abstract)

ಕರ್ನಾಟಕ ರಾಜ್ಯದ ದಕ್ಷಿಣದ ತುತ್ತ ತುದಿಯಲ್ಲಿರುವ ಚಾಮರಾಜನಗರ ಜಿಲ್ಲೆಯು ತನ್ನದೇ ಆದ ವಿಶೇಷವಾದ ಸ್ಥಾನಮಾನವನ್ನು ಹೊಂದಿದೆ. ಜಿಲ್ಲೆ ರಚನೆಯ ಪೂರ್ವದಲ್ಲಿ ಮೈಸೂರು ಜಿಲ್ಲೆಗೆ ಸೇರಿತ್ತು. ನಂತರ 1997 ಆಗಸ್ಟ್ 15ರಂದು ಸ್ವತಂತ್ರ ಜಿಲ್ಲೆಯಾಗಿ ರೂಪುಗೊಂಡಿತು. ದಕ್ಷಿಣ ಭಾರತದ ಒಂದು ಪ್ರಮುಖ ಪ್ರದೇಶವಾದ ಚಾಮರಾಜನಗರ ಜಿಲ್ಲೆಯು ಐತಿಹಾಸಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಅತ್ಯಂತ ಮಹತ್ವದ ಸ್ಥಾನಮಾನವನ್ನು ಪಡೆದಿದೆ. ಕ್ರಿ.ಶ.1818ರವರೆಗೂ ಚಾಮರಾಜನಗರವನ್ನು ಅರಿಕುಠಾರ ಎಂದೇ ಕರೆಯಲಾಗುತ್ತಿತ್ತು. ಮೈಸೂರು ಒಡೆಯರ್ ವಂಶದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ತಂದೆಯವರಾದ ಚಾಮರಾಜ ಒಡೆಯರ್ ಅವರು ಇಲ್ಲಿ ಜನಿಸಿದರು. ಆದ್ದರಿಂದ ಅವರ ಜನ್ಮದಿನದ ನೆನಪಿಗಾಗಿ ಶೃಂಗೇರಿ ಪರಕಾಲ ಮಠದ ಸ್ವಾಮೀಜಿ ಅವರ ಸಲಹೆ ಸೂಚನೆಯಂತೆ 1823ರಲ್ಲಿ 'ಅರಿಕುಠಾರ' ಎಂಬ ನಾಮಾಂಕಿತ ಬದಲಾಯಿಸಿ 'ಚಾಮರಾಜನಗರ' ಎಂದು ನಾಮಕರಣ ಮಾಡಲಾಯಿತು.

ಮುಖ್ಯಪದಗಳು (Keywords): ಅರಿಕುಠಾರ, ಚಾಮರಾಜನಗರ, ಅಭಿವೃದ್ಧಿ, ಮುಮ್ಮಡಿ ಕೃಷ್ಣರಾಜ ಒಡೆಯರ್.

ಪೀಠಿಕೆ

ಚಾಮರಾಜನಗರ ಜಿಲ್ಲೆಯು ರಚನೆಯ ಪೂರ್ವದಲ್ಲಿ ಮೈಸೂರು ಜಿಲ್ಲೆಗೆ ಸೇರಿತ್ತು. ಈ ಮೊದಲು ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಗಳು ಮೈಸೂರು ಜಿಲ್ಲೆಗೆ ಸೇರಿದ ತಾಲೂಕು ಕೇಂದ್ರಗಳಾಗಿದ್ದವು. ಆದರೆ 1939ರ ಜುಲೈ 1ರಂದು ಮೈಸೂರು ಜಿಲ್ಲೆಯನ್ನು ವಿಂಗಡಿಸಿ ಮಂಡ್ಯ ಜಿಲ್ಲೆಯನ್ನು ಅಸ್ತಿತ್ವಕ್ಕೆ ತರಲಾಯಿತು. ಈ ಜಿಲ್ಲೆಗೆ ಮಂಡ್ಯ ಮತ್ತು ಫ್ರೆಂಚ್ ರಾಕ್ಸ್ ಉಪ ವಿಭಾಗಗಳ 7 ತಾಲೂಕುಗಳನ್ನು ಸೇರಿಸಲಾಯಿತು. ಇನ್ನೂ ಉಳಿದ 8 ತಾಲೂಕುಗಳು ಮೈಸೂರು ಜಿಲ್ಲೆಯಲ್ಲೇ ಉಳಿದುಕೊಂಡವು. 1956ರ ರಾಜ್ಯ ಪುನರ್ವಿಂಗಡನೆಯ ಕಾಯ್ದೆಯ ಪ್ರಕಾರ ಈರೋಡ್ ಜಿಲ್ಲೆಗೆ ಸೇರಿದ್ದ ಕೊಳ್ಳೇಗಾಲ ತಾಲೂಕನ್ನು ಮೈಸೂರು ಜಿಲ್ಲೆಗೆ ವರ್ಗಾಹಿಸಲಾಯಿತು. 1997ರಲ್ಲಿ ಮೈಸೂರು ಜಿಲ್ಲೆಯಿಂದ ಪ್ರತ್ಯೇಕಿಸಿ ಹೊಸದಾಗಿ ಚಾಮರಾಜನಗರ, ಗುಂಡ್ಲುಪೇಟೆ ಕೊಳ್ಳೇಗಾಲ ಮತ್ತು ಯಳಂದೂರು ತಾಲೂಕುಗಳನ್ನು ಒಳಗೊಂಡ ನೂತನ ಜಿಲ್ಲೆಯನ್ನು ರಚಿಸಲಾಯಿತು.

Please cite this article as: ನವೀನ ಎಸ್.ಎಂ. ಮತ್ತು ಜೆ.ಸೋಮಶೇಖರ್ (2024). ಇಪ್ಪತ್ತೈದು ವರ್ಷಗಳಲ್ಲಿ ಚಾಮರಾಜನಗರ ಜಿಲ್ಲೆಯ ಅಭಿವೃದ್ಧಿಯ ಸುತ್ತ ಒಂದು ಹೆಜ್ಜೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(4). ಪು.ಸಂ. 46–54.*

ಚಾಮರಾಜನಗರ ಜಿಲ್ಲೆಯು ತಮಿಳುನಾಡು ಮತ್ತು ಕೇರಳ ರಾಜ್ಯಗಳೊಂದಿಗೆ ಗಡಿಹೊಂದಿದೆ. ಜಿಲ್ಲೆಯ ಉತ್ತರಕ್ಕೆ ಮಂಡ್ಯ ಮತ್ತು ಬೆಂಗಳೂರು ಜಿಲ್ಲೆಗಳು ದಕ್ಷಿಣಕ್ಕೆ ತಮಿಳುನಾಡಿನ ನೀಲಗಿರಿ ಶ್ರೇಣಿ, ಪೂರ್ವಕ್ಕೆ ತಮಿಳುನಾಡಿನ ಧರ್ಮಪುರಿ ಜಿಲ್ಲೆ ಹಾಗೂ ಪಶ್ಚಿಮಕ್ಕೆ ಮೈಸೂರು ಜಿಲ್ಲೆಗಳೊಂದಿಗೆ ಗಡಿಹಂಚಿಕೊಂಡಿರುವ ಒಂದು ಹೊಸ ಜಿಲ್ಲೆಯಾಗಿ ರಚನೆಗೊಂಡಿರುತ್ತದೆ. ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು 1681 ಹಳ್ಳಿಗಳು ಕಂಡುಬರುತ್ತದೆ. ಒಟ್ಟು 130 ಗ್ರಾಮ ಪಂಚಾಯಿತಿಗಳಿದ್ದು ಐದು ತಾಲೂಕು ಪಂಚಾಯಿತಿ, ಒಂದು ಜಿಲ್ಲಾ ಪಂಚಾಯಿತಿ ಹಾಗೂ ಎರಡು ನಗರ ಸಭೆ, ಎರಡು ಪಟ್ಟಣ ಪಂಚಾಯಿತಿಯನ್ನು ಒಳಗೊಂಡಿದೆ. ಈ ಜಿಲ್ಲೆಯ ಅಕ್ಷಾಂಶ 11'40'58 ಮತ್ತು 12'06'3'2 ಡಿಗ್ರಿ ಹೊಂದಿದೆ ಹಾಗೂ ರೇಖಾಂಶ ಪೂರ್ವಕ್ಕೆ 76'24'4 ಮತ್ತು 77'46'55 ಡಿಗ್ರಿ ಕಂಡುಬರುತ್ತದೆ. ಜಿಲ್ಲೆಯಲ್ಲಿ ಒಟ್ಟು ವಿಸ್ತೀರ್ಣ 5676 ಚ.ಕಿ.ಮೀ ಇದೆ. ಪ್ರತಿ ಚ.ಕಿ.ಮೀಟರ್‌ಗೆ 189 ಜನಸಾಂದ್ರತೆಯನ್ನು ಹೊಂದಿದೆ. 2014–15 ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ಒಟ್ಟು 10,20,962 ಜನಸಂಖ್ಯೆ ಇದ್ದು ಅದರಲ್ಲಿ 560,481 ಪುರುಷರು, 460,481 ಮಹಿಳೆಯರು ಇದ್ದಾರೆ. ಹಾಗೆಯೇ ಒಟ್ಟು ಜನಸಂಖ್ಯೆಯಲ್ಲಿ 817,372 ಜನ ಗ್ರಾಮಾಂತರ ಪ್ರದೇಶದಲ್ಲೂ 203,590 ಜನ ನಗರ ಪ್ರದೇಶಗಳಲ್ಲಿ ವಾಸಮಾಡುತ್ತಿದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಜನಸಂಖ್ಯೆ ಹೆಚ್ಚಾಗಿರುತ್ತದೆ. ಜನಸಂಖ್ಯೆ ಮತ್ತು ಜಾತಿವಾರು ಅಭಿವೃದ್ಧಿಯನ್ನು ತಳಸ್ಪರ್ಶಿಯಾಗಿ ಅಧ್ಯಯನ ಮಾಡಿದಾಗ ಖಚಿತವಾದ ಮಾಹಿತಿ ಪಡೆಯಬಹುದು. ಜಿಲ್ಲೆಯ ಜನವರ್ಗಗಳನ್ನು ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಸಬಲೀಕರಣಗೊಳಿಸಲು ಆಳುವ ಸರ್ಕಾರಗಳು ಪ್ರಯತ್ನಿಸುತ್ತಿವೆ ಆದರೂ ಪರಿಪೂರ್ಣವಾಗಿ ಅಭಿವೃದ್ಧಿಯಾಗಿಲ್ಲದಿರುವುದನ್ನು ಗುರುತಿಸಬಹುದಾಗಿದೆ.

ಚಾಮರಾಜನಗರ ಜಿಲ್ಲಾ ರಚನಾ ಪ್ರಕ್ರಿಯೆಯು ಭಾರತದ ಸುವರ್ಣ ಸ್ವಾತಂತ್ರ್ಯದ ಉಡುಗೊರೆಯಾಗಿ ಕರ್ನಾಟಕ ಸರ್ಕಾರದ ಗೌರವಾನ್ವಿತ ಮುಖ್ಯಮಂತ್ರಿ ಜೆ.ಹೆಚ್.ಪಟೇಲ್‌ರವರು ಮಲೆ ಮಹದೇಶ್ವರ ಬೆಟ್ಟದಲ್ಲಿ ಹೊಸ ಜಿಲ್ಲೆಯನ್ನು ಉದ್ಘಾಟಿಸಿದರು. ಆಗಿನ ಉಪಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಸಚಿವ ನಾಗಪ್ಪ ಅವರೊಂದಿಗೆ ಚಾಮರಾಜನಗರ ಜಿಲ್ಲೆಯ ಎಂ.ಎಲ್.ಎ.ಗಳಾದ ಹೆಚ್.ಎಸ್.ಮಹದೇವಪ್ರಸಾದ್, ವಾಟಾಳ್ ನಾಗರಾಜ್, ಎ.ಆರ್.ಕೃಷ್ಣಮೂರ್ತಿ, ಚಾಮರಾಜನಗರ ಜಿಲ್ಲೆಯ ಉಪ ಕಮೀಷನರ್ ಕಛೇರಿಯನ್ನು ಉದ್ಘಾಟಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೇರಳದ ಮಾಜಿ ರಾಜ್ಯಪಾಲರಾದ ಬಿ.ರಾಚಯ್ಯನವರು ನೇತೃತ್ವವನ್ನು ವಹಿಸಿದರು.

ನಾಡುಕಂಡ ಹೆಮ್ಮೆಯ ರಾಜಕಾರಿಣಿ ಬಿ.ರಾಚಯ್ಯರವರು ಬುದ್ಧರ ಮಾರ್ಗವಾಗಿ, ಡಾ.ಬಿ.ಆರ್.ಅಂಬೇಡ್ಕರ್‌ರವರ ಆದರ್ಶ,ಮೌಲ್ಯಗಳನ್ನು ಮೈಗೂಡಿಸಿಕೊಂಡು ರಾಜಕಾರಣ ಮಾಡಿದ ರಾಚಯ್ಯನವರು ಚಾಮರಾಜನಗರ ಜಿಲ್ಲೆಯ ಹರಿಕಾರ ಎಂದು ಹೇಳಬಹುದು. ಅಂದಿನ ಕಾಲಘಟ್ಟದಲ್ಲಿ ದಲಿತ ರಾಜಕಾರಣದಲ್ಲಿ ಹೆಸರು ಮಾಡಿದ ಧೀಮಂತ ನಾಯಕರಾಗಿದ್ದರು. ಇವರು ಶಿಕ್ಷಣ ಸಚಿವರಾಗಿ ಸಮಗ್ರ ಶಿಕ್ಷಣ ನೀತಿ ಜಾರಿಗೆ ತಂದು ಶಿಕ್ಷಣ ಕ್ರಾಂತಿ ಮಾಡಿದರು. ತುಳಿತಕ್ಕೆ ಒಳಗಾದ ಸಮುದಾಯಗಳಿಗೆ ಸವಲತ್ತು ಕಲ್ಪಿಸಲು ಅವರ ಹೇಳಿಗೆಗಾಗಿ, ಜಿಲ್ಲೆಯ ಪ್ರಗತಿಗಾಗಿ ಪಣತೊಟ್ಟಿದ್ದರು. ಇವರು ಸುವರ್ಣಾವತಿ ಜಲಾಶಯ ಮತ್ತು ಚಿಕ್ಕಹೊಳೆ ಜಲಾಶಯಗಳಿಗೆ ಅಣೆಕಟ್ಟೆ ಕಟ್ಟಿ ನೀರಾವರಿ ಯೋಜನೆಯನ್ನು ಅಭಿವೃದ್ಧಿ ಪಡಿಸಿದ ಕೀರ್ತಿ ಬಿ.ರಾಚಯ್ಯನವರಿಗೆ ಸಲ್ಲುತ್ತದೆ ಹಾಗೂ ಜಿಲ್ಲೆಯಲ್ಲಿ ಜನಮನವನ್ನು ಗೆದ್ದಂತಹ

ಲೋಕಸಭೆಯ ಸದಸ್ಯರು ಹಾಗೂ ವಿಧಾನ ಸಭೆಯ ಸದಸ್ಯರು ಆಗಿದ್ದಂತಹ ವಿ.ಶ್ರೀನಿವಾಸಪ್ರಸಾದ್, ಎಸ್.ಎಂ.ಸಿದ್ದಯ್ಯ, ಬಿ.ರಾಚಯ್ಯ, ಎ.ಸಿದ್ದರಾಜು, ಎಂ.ಸಿ.ಬಸಪ್ಪ, ಎಸ್.ಪುಟ್ಟಣ್ಣಯ್ಯ, ಸಿ.ಗುರುಸ್ವಾಮಿ ಧ್ರುವನಾರಾಯಣ್, ಎಸ್.ಜಯಣ್ಣ, ವಾಟಾಳ್‌ನಾಗರಾಜ್, ಹೆಚ್.ಎಸ್. ಮಹದೇವಪ್ರಸಾದ್, ಕಾಗಲವಾಡಿ ಶಿವಣ್ಣ ಮತ್ತು ಪುಟ್ಟರಂಗಶೆಟ್ಟಿ ಇವರು ಜನಪ್ರತಿನಿಧಿಗಳಾಗಿ ಜಿಲ್ಲೆಯ ಅಭಿವೃದ್ಧಿಗೆ ತಮ್ಮದೇ ಆದಂತಹ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಜಿಲ್ಲಾ ರಚನೆಯ ಸಂದರ್ಭದಲ್ಲಿ ಜನರ ಬೆಂಬಲ, ಪ್ರಗತಿಯ ದೂರ ದೃಷ್ಟಿ, ಅಭಿವೃದ್ಧಿಯ ಉದ್ದೇಶ ಹಾಗೂ ಆಡಳಿತದ ಅನುಕೂಲಕ್ಕಾಗಿ ಜಿಲ್ಲೆಯ ರಚನೆಯನ್ನು ಮಾಡಬೇಕೆಂದು ಒಕ್ಕೊರಳ ಅಭಿಪ್ರಾಯದ ಮೇರೆಗೆ ಚಾಮರಜನಗರ ಜಿಲ್ಲೆಯನ್ನು ರಚಿಸಲು ಕಾರಣವಾಯಿತು.

ಚಾಮರಾಜನಗರಕ್ಕೆ ಭೇಟಿ ಕೊಟ್ಟ ಮುಖ್ಯಮಂತ್ರಿಗಳು, ಉನ್ನತ ಅಧಿಕಾರಿಗಳು, ಆರು ತಿಂಗಳಿನಲ್ಲಿ ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬ ನಂಬಿಕೆ ಬಹು ಹಿಂದಿನ ಕಾಲದಿಂದಲೂ ಇದೆ. ಚಾಮರಾಜನಗರವು ಶಾಪಗ್ರಸ್ತ ಜಿಲ್ಲೆ ಎಂಬುದನ್ನು ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಪಟ್ಟಣಕ್ಕೆ ಹತ್ತು ಬಾರಿ, ಜಿಲ್ಲೆಗೆ 23 ಬಾರಿ ಭೇಟಿ ನೀಡಿ ಶಾಪ ವಿಮೋಚನೆ ಮಾಡಿದ್ದಾರೆ. ಇದಲ್ಲದೇ ಜಿಲ್ಲೆಯ ಅಭಿವೃದ್ಧಿಗೆ 280 ಕೋಟಿ.ರೂ ಮೌಲ್ಯದ ಕುಡಿಯುವ ನೀರಿನ ಯೋಜನೆ ಸೇರಿ ಒಟ್ಟು 800 ಕೋಟಿ ರೂ. ಮೊತ್ತದಷ್ಟು ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿರುವುದು ಹೆಮ್ಮೆಯ ಸಂಗತಿ. ಸ್ವತ: ಸಿದ್ದರಾಮಯ್ಯನವರೇ ಹೇಳಿರುವಂತೆ 'ಚಾಮರಾಜನಗರವು ಪ್ರತ್ಯೇಕ ಜಿಲ್ಲೆಯಾಗಿದ್ದರು ನಾನದನ್ನು ಇನ್ನೂ ಮೈಸೂರಿನ ಭಾಗವಾಗಿಯೇ ನೋಡುತ್ತೇನೆ ಮತ್ತು ನಾನು ಚಾಮರಾಜನಗರಕ್ಕೆ ಅತ್ಯಂತ ಸಂತಸ ಹಾಗೂ ಪ್ರೀತಿಯಿಂದ ಆಗಮಿಸುತ್ತೇನೆ' ಎಂದು ಹೇಳಿರುವುದು ಇಂದಿಗೂ ಪ್ರಸ್ತುತ ಎನಿಸುತ್ತದೆ.

ಜಿಲ್ಲೆಯ ರಚನೆಯ ನಂತರ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಜಿಲ್ಲೆಯ ಅಭಿವೃದ್ದಿ ಪಡಿಸಲು ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ರೇಷ್ಮೆ ಇಲಾಖೆ, ಅರಣ್ಯ ಇಲಾಖೆ, ಕೈಗಾರಿಕೆ ಇಲಾಖೆ, ಕಾರ್ಮಿಕರ ಇಲಾಖೆ, ಅಬಕಾರಿ ಇಲಾಖೆ,ಹೈನುಗಾರಿಕೆ ಮತ್ತು ಪಶು ಸಂಗೋಪನೆ ಇಲಾಖೆ, ಕೃಷಿ ಉತ್ಪನ್ನ ಮಾರುಕಟ್ಟೆ ಕೇಂದ್ರಗಳು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳು, ಸಮಾಜ ಕಲ್ಯಾಣ ಇಲಾಖೆಗಳು, ವೈದ್ಯಕೀಯ ಕೇಂದ್ರ, ಆಹಾರ ಮತ್ತು ನಾಗರೀಕ ಸರಬರಾಜು ಕೇಂದ್ರ, ಮಣ್ಣು ಸಂಶೋಧನಾ ಕೇಂದ್ರ, ಭೂ ಮತ್ತು ಗಣಿಗಾರಿಕೆ ಇಲಾಖೆ ಹೀಗೆ ಇನ್ನೂ ಮುಂತಾದ ಅನೇಕ ಇಲಾಖೆಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಅಭಿವೃದ್ಧಿ ನಿಗಮಗಳು ಜಿಲ್ಲೆಯಲ್ಲಿ ಕಾರ್ಯ ಪ್ರವೃತ್ತವಾಗಿ ಅಭಿವೃದ್ಧಿ ಪಡಿಸಲು ಸಮರ್ಥವಾಗಿದೆ.

ಹಾಗೆಯೇ ಜಿಲ್ಲೆಯ ಅಭಿವೃದ್ಧಿಗಾಗಿ 1977 ರಿಂದ 2022 ರವರೆಗೆ ಹಲವಾರು ಯೋಜನೆಗಳನ್ನು ಜಾರಿ ಮಾಡಿದ್ದಾರೆ. ಅವುಗಳೆಂದರೆ ಪಂಚ ವಾರ್ಷಿಕ ಯೋಜನೆಗಳು, ಮುಖ್ಯಮಂತ್ರಿ ಗ್ರಾಮ ವಿಕಾಸ, ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ, ಜಿಲ್ಲಾ ಪರಿಸರ ಯೋಜನೆ, ಪ್ರಧಾನ ಮಂತ್ರಿ ರಸ್ತೆ ಯೋಜನೆ, ಅನಿಲ ಯೋಜನೆ, ಭಾಗ್ಯ ಲಕ್ಷೀ ಯೋಜನೆ, ಕೌಶಲ್ಯ ತರಬೇತಿ ಕೇಂದ್ರಗಳು, ಭೂ ಒಡೆತನ ಯೋಜನೆ, ಗಂಗಾ ಕಲ್ಯಾಣ ಯೋಜನೆ, ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ, ಉದ್ಯಮಶೀಲ ಯೋಜನೆ, ಸ್ವಯಂ ಉದ್ಯೋಗ ಯೋಜನೆ, ನರ್ಸರಿ ಮತ್ತು ಕಲ್ಯಾಣ ಕೆಂದ್ರಗಳು, ಮೆಟ್ರಿಕ್ ಪೂರ್ವ

ವಿದ್ಯಾರ್ಥಿ ನಿಲಯ, ವಸತಿ ಮತ್ತು ಆಶ್ರಮ ಶಾಲೆಗಳು, ಮೋರಾರ್ಜಿ ದೇಸಾಯಿ ವಸತಿ ಶಲೆ ಯೋಜನೆ, ವಿವೇಕಾನಂದ ಗಿರಿಜನ ಆಶ್ರಮ ಶಾಲೆ, ಸಂಜೀವಿನಿ ಪಶ್ಚಿಮ ಘಟ್ಟದ ಅಭಿವೃದ್ಧಿ ಕಾರ್ಯಕ್ರಮ, ಸುವರ್ಣ ಗ್ರಾಮೋದಯ, ಗ್ರಾಮ ಸ್ವರಾಜ್, ರಾಷ್ಟ್ರೀಯ ಜೈವಾನೀಲ ಅಭಿವೃದ್ಧಿ ಯೋಜನೆ, ಗ್ರಾಮ ಸಾಕ್ಷರತೆ ಯೋಜನೆ, ಗ್ರಾಮ ಕ್ರೀಯಾತ್ಮಕ ಯೋಜನೆ, ಸಾಕ್ಷಾರತ ಯೋಜನೆ, ಅಕ್ಷರ ದೀಪ, ಸಂಪೂರ್ಣ ಸಾಕ್ಷಾರತಾ ಯೋಜನೆ, ಸರ್ವ ಶಿಕ್ಷಣ ಅಭಿಯಾನ, ಕ್ಷೀರಭಾಗ್ಯ, ಅನ್ನಭಾಗ್ಯ, ಪ್ರಧಾನ್ ಮಂತ್ರಿ ಆವಾಸ್ ಯೋಜನೆ, ಕನ್ನಡ ನಾಡು ಸಾಕ್ಷರ ನಾಡು, ಎಂಬ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಜಿಲ್ಲಾಡಳಿತದ ಯೋಜನೆಯನ್ನು ಜಾರಿಗೆ ತರುವುದರ ಮೂಲಕವಾಗಿ ಜಿಲ್ಲೆಯ ಅಭಿವೃದ್ಧಿಯಲ್ಲಿ ಪ್ರಗತಿ ಸಾಧಿಸಲು ಪ್ರಯತ್ನಿಸಲಾಗುತ್ತಿದೆ.

ಜಿಲ್ಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯು ದಿನಾಂಕ 22/09/1998 ರಿಂದ ಅಸ್ಥಿತ್ವಕ್ಕೆ ಬಂದು ಶಿಕ್ಷಣ ಇಲಾಖೆಯು ಕೆಲಸ ಕಾರ್ಯ ನಿರ್ವಹಿಸುತ್ತಿದೆ. ಜಿಲ್ಲೆಯಲ್ಲಿ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಜಿಲ್ಲಾ ಮಟ್ಟದ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ಇವರ ಅಧೀನದಲ್ಲಿ 4 ತಾಲೂಕು ಕೇಂದ್ರಗಳಲ್ಲಿ ಹಾಗೂ ಕೊಳ್ಳೇಗಾಲ ತಾಲೂಕನ್ನು ಶೈಕ್ಷಣಿಕವಾಗಿ ಎರಡು ವಲಯಗಳಾಗಿ ವಿಭಜಿಸಿದ್ದು ಪ್ರತಿ ವಲಯಕ್ಕೆ ಒಬ್ಬೊಬ್ಬರು ಕ್ಷೇತ್ರ ಶಿಕ್ಷಣಾಧಿಕಾರಿಗಳಂತೆ ಒಟ್ಟು 5 ಕ್ಷೇತ್ರ ಶಿಕ್ಷಣಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. 2010–11 ನೇ ಸಾಲಿನಲ್ಲಿ ಜಿಲ್ಲೆಯಲ್ಲಿ 771 ಸರ್ಕಾರಿ, 40 ಅನುದಾನಿತ ಹಾಗೂ 108 ಅನುದಾನರಹಿತ ಶಾಲೆಗಳು ಒಟ್ಟು 918 ಪ್ರಾಥಮಿಕ ಶಾಲೆಗಳು, 80 ಸರ್ಕಾರಿ, 37 ಅನುದಾನಿತ ಹಾಗೂ 63 ಅನುದಾನರಹಿತ ಶಾಲೆಯು ಸೇರಿ ಒಟ್ಟು 180 ಪ್ರೌಡಶಾಲೆಗಳು ಅಂದರೆ ಒಟ್ಟು 1098 ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲೆ ರಚನೆಯಾಗಿ ಇಪ್ಪತ್ತೈದು ವರ್ಷವಾದರೂ ಪ್ರತ್ಯೇಕ ವಿಶ್ವ ವಿದ್ಯಾನಿಲಯ ಇಲ್ಲವೆಂಬುದು ಇಂದಿಗೂ ವಿಷಾದನೀಯ.

ಜಿಲ್ಲೆಯು ಹೆಚ್ಚಿನ ಅರಣ್ಯ ಪ್ರದೇಶವನ್ನು ಹೊಂದಿದ್ದು, ಇತ್ತೀಚಿನ ದಿನದಲ್ಲಿ ಪರಿಶುದ್ಧವಾದ ಆಮ್ಲಜನಕವನ್ನು ಹೊಂದಿರುವ ಜಿಲ್ಲೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಜಿಲ್ಲೆಯಲ್ಲಿ ಹೆಚ್ಚಿನ ಜನರು ಗ್ರಾಮಾಂತರ ಪ್ರದೇಶದಲ್ಲಿ ವಾಸವಾಗಿದ್ದು, ಬಹುತೇಕ ಜನರು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದವರಾಗಿದ್ದಾರೆ. ಇವರ ಪರಿಸ್ಥಿತಿಯು ಈಗಲೂ ಸಹ ಸುಧಾರಿಸಿಲ್ಲ. ಸ್ವಾತಂತ್ರ್ಯ ಬಂದು 75ರ ಅಮೃತ ಮಹೋತ್ಸವವನ್ನು ಆಚರಿಸುತ್ತಿದ್ದರು ಸಹ ಜನರು ತಮ್ಮ ಜೀವನ ನಿರ್ವಹಣೆಗಾಗಿ ಪರಿತಪಿಸುತ್ತಿದ್ದಾರೆ. ಬೆಟ್ಟ ಗುಡ್ಡದ ತಪ್ಪಲಿನಲ್ಲಿ ವಾಸಿಸುವಂತಹ ಬುಡಕಟ್ಟು ಸಮುದಾಯಗಳಾದ ಅಕ್ಕಿಪಿಕ್ಕಿ ಜನಾಂಗ, ಯರವರು, ಸೋಲಿಗ ಸಮುದಾಯ, ಹಾಡಿ ಜನ, ಜೇನು ಕುರುಬ, ಕಾಡು ಕುರುಬ, ಲಂಬಾಣಿಮತ್ತು ವಡ್ಡರು ತಮ್ಮ ಜೀವನವನ್ನು ನಿರ್ವಹಿಸಲು ಕೂಲಿಯನ್ನೇ ಅವಲಂಭಿಸಿದ್ದಾರೆ. ಇವರ ಜೀವನ ನಿರೀಕ್ಷಿತ ಮಟ್ಟದಲ್ಲಿ ಸುಧಾರಣೆಯಾಗಿಲ್ಲ. ಸರ್ಕಾರದ ಯೋಜನೆಗಳು ಸರಿಯಾದ ರೀತಿಯಲ್ಲಿ ತಲುಪಿದ್ದರೆ ಈ ದುಸ್ಥಿತಿ ಬರುತ್ತಿರಲಿಲ್ಲ. 1947ರಲ್ಲಿ ಪಡೆದ ಸ್ವಾತಂತ್ರ್ಯವು ಅದು ಸ್ವಾತಂತ್ರ್ಯವಲ್ಲ ಅದು ಬ್ರಿಟೀಷರಿಂದ ಪಡೆದ ಮುಕ್ತಿ ಅಷ್ಟೇ? ಆದರೆ ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯ, ಹಕ್ಕು ಮತ್ತು ಅಧಿಕಾರಗಳು ಇನ್ನೂ ಕೂಡ ದಕ್ಕಿದಂತೆ ಕಾಣುತ್ತಿಲ್ಲ.

ಕರ್ನಾಟಕ ರಾಜ್ಯವು ತನ್ನ ರಾಜ್ಯದ ಜನತೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮುಖಾಂತರ ಸಮಗ್ರ ಆರೋಗ್ಯ ರಕ್ಷಣೆಯ ಸೇವೆಗಳನ್ನು ವಿವಿಧ ತೆರನಾದ ಆರೋಗ್ಯ ಸಂಸ್ಥೆಗಳ ಮುಖಾಂತರ ಒದಗಿಸುತ್ತಿದೆ. 1907 ರಲ್ಲಿ ಸಾರ್ವಜನಿಕ ಆರೋಗ್ಯ ವಿಭಾಗವನ್ನು ಮೈಸೂರಿನಿಂದ ಚಾಮರಾಜನಗರಕ್ಕೆ ವಿಸ್ತರಿಸಲಾಯಿತು. 1929 ರಿಂದ ಆರೋಗ್ಯ ಇಲಾಖೆಯನ್ನು ಪ್ರಾರಂಭಿಸಿ, ಆರೋಗ್ಯ ನಿರ್ದೇಶಕರನ್ನು ನೇಮಿಸಲಾಯಿತು. 1967 ರಲ್ಲಿ ಆರೋಗ್ಯ ಮತ್ತು ಕುಟುಂಬ ಯೋಜನೆ ಸೇವೆಗಳ ಇಲಾಖೆ ಎಂದು ನಾಮಕರಣ ಮಾಡಿ ಮತ್ತೆ 1977 ರಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ ಎಂದು ಪುನರ್ ನಾಮಕರಣ ಮಾಡಲಾಯಿತು. ಜಿಲ್ಲೆಯಲ್ಲಿ ಗ್ರಾಮೀಣ ಆರೋಗ್ಯ ಯೋಜನೆ, ಚಿಕಿತ್ಸಾತ್ಮಕ ಸೇವೆಗಳು, ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (NRHM) ರಾಷ್ಟ್ರೀಯ ಕ್ಷಯರೋಗ ನಿಯಂತ್ರಣಾ ಕಾರ್ಯಕ್ರಮ, ರಾಷ್ಟ್ರೀಯ ಅಂಧತ್ವ ನಿಯಂತ್ರಣಾ ಕಾರ್ಯಕ್ರಮ, ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವುದು ಹಾಗೂ ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದಾಗಿದೆ. ಚಾಮರಾಜನಗರದಲ್ಲೂ ಸಹ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಉಪಕೇಂದ್ರಗಳು ಎಂಬ ಮೂರು ಹಂತಗಳಲ್ಲಿ ಆರೋಗ್ಯ ಸೇವೆಯನ್ನು ಒದಗಿಸಲಾಗುತ್ತಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮುಖ್ಯವಾಗಿ ವೈದ್ಯಕೀಯ ಚಿಕಿತ್ಸೆ ನೀಡುವುದು ತಾಯಿ ಮತ್ತು ಮಕ್ಕಳ ಆರೋಗ್ಯ ಪೌಷ್ಠಿಕ ಆಹಾರ ಹಾಗೂ ಕುಟುಂಬ ಯೋಜನೆ ಕಾರ್ಯಕ್ರಮಗಳು ಮತ್ತು ಚುಚ್ಚು ಮದ್ದಿನ ಕಾರ್ಯಕ್ರಮ ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸುವುದು. ಶಾಲಾ ಆರೋಗ್ಯ ಸೇವೆಗಳು, ಪರಿಸರದ ನೈರ್ಮಲ್ಯ ಜನನ ಮತ್ತು ಮರಣಗಳ ದಾಖಲಾತಿ ಆರೋಗ್ಯ ಶಿಕ್ಷಣ ಮತ್ತು ತರಭೇತಿ ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರ ಕನಿಷ್ಠ 6 ಹಾಸಿಗೆಗಳ ಸೌಕರ್ಯಗಳನ್ನು ಹೊಂದಿರುತ್ತದೆ.

ಚಾಮರಾಜನಗರ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಆಲೂರು, ಅರಕಲವಾಡಿ, ಅರಳೀಕಟ್ಟೆ, ಬೇಡ್‌ಗುಳಿ, ಬಿಸಲವಾಡಿ, ಚಂದಕವಾಡಿ, ಹಳ್ಳಿಕೆರೆಹುಂಡಿ, ಹರದನಹಳ್ಳಿ, ಬಂದಳ್ಳಿ, ಚಿಲಕವಾಡಿ, ಹನೂರು, ದೊಡ್ಡಿಂದುವಾಡಿ, ಪಿ.ಜಿ.ಪಾಳ್ಯ, ಬಾಚಳ್ಳಿ, ಬನ್ನಿತಾಳಪುರ, ಬರಗ, ಬೊಮ್ಮಲಾಪುರ, ಅಗರಾಮಂಬಳ್ಳಿ, ಗೌಡಳ್ಳಿ, ಹೊನ್ನೂರು, ಗುಂಬಳ್ಳಿಗಳಲ್ಲಿ ಕಂಡು ಬರುತ್ತವೆ. ಜಿಲ್ಲೆಯ ಚಂದಕವಾಡಿ, ಒಡೆಯರ್ ಪಾಳ್ಯ, ಗುಡ್ಡಗಾಡು ಪ್ರದೇಶಗಳಲ್ಲಿ ಸಂಚಾರಿ ತಂಡಗಳಿವೆ. ಚಾಮರಾಜನಗರ ಮತ್ತು ಕೊಳ್ಳೆಗಾಲದಲ್ಲಿ 150 ಹಾಸಿಗೆಗಳಿರುವ ಸಾರ್ವಜನಿಕ ಆಸ್ಪತ್ರೆ ಹಾಗೂ ಗುಂಡ್ಲುಪೇಟೆ ಮತ್ತು ಯಳಂದೂರಿನಲ್ಲಿ 100 ಹಾಸಿಗೆಗಳಿರುವ ಸಾರ್ವಜನಿಕ ಆಸ್ಪತ್ರೆಗಳು ಕಾರ್ಯ ನಿರ್ವಹಿಸುತ್ತಿವೆ. ಜಿಲ್ಲೆಯಲ್ಲಿ ಒಟ್ಟು 254 ಆರೋಗ್ಯ ಉಪಕೇಂದ್ರಗಳ ಪೈಕಿ ಚಾಮರಾಜನಗರ ತಾಲೂಕಿನಲ್ಲಿ 83 ಗುಂಡ್ಲುಪೇಟೆ ತಾಲೂಕಿನಲ್ಲಿ 80, ಯಳಂದೂರಿನಲ್ಲಿ 23 ಮತ್ತು 68 ಕೊಳ್ಳೇಗಾಲ ಮತ್ತು ಹನೂರಿನಲ್ಲಿ 68 ಉಪಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಇಷ್ಟೇಲ್ಲಾ ಆದಾಗಿಯೂ ಸಹ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಬೇರೆಯ ಜಿಲ್ಲೆಗಳು, ಆಸ್ಪತ್ರೆಗಳನ್ನು ಅವಲಂಭಿಸಬೇಕಾಗಿದೆ. ಆಧುನಿಕ ಯಂತ್ರ ತಂತ್ರಗಳು, ವೈದ್ಯಕೀಯ ಸಲಕರಣೆಗಳನ್ನು ಒಳಗೊಂಡ ಆಧುನಿಕ ಆಸ್ಪತ್ರೆಗಳನ್ನು ನಿರ್ಮಿಸಬೇಕಾಗಿದೆ.

ಚಾಮರಾಜನಗರ ಜಿಲ್ಲೆಯು ರಾಜ್ಯದ ಅರಣ್ಯದಲ್ಲಿ 2ನೇ ಸ್ಥಾನವನ್ನು ಹೊಂದಿದ್ದು, ಒಟ್ಟು 2,59,741 ಹೆಕ್ಟೆರ್ ವಿಸ್ತೀರ್ಣ ಅರಣ್ಯ ಪ್ರದೇಶವನ್ನು ಒಳಗೊಂಡಿದೆ. ಅರಣ್ಯಗಳು ಜಿಲ್ಲೆಗೆ ಮೆರುಗನ್ನು ನೀಡುತ್ತಿದ್ದು,

ಪ್ರಪಂಚದ ಜನರನ್ನು ಕೈಬಿಸಿ ಕರೆಯುತ್ತಿದೆ. ಬಹು ಮುಖ್ಯವಾಗಿ ಅರಣ್ಯಗಳ ನಿರ್ವಹಣೆ, ವನ್ಯಜೀವಿ ಸಂರಕ್ಷಣೆ, ಬಂಜರು ಭೂಮಿ ಹಾಗೂ ಕೃಷಿ ಪ್ರದೇಶದಲ್ಲಿ ಮರ ಬೆಳೆಸುವುದು ಸೇರಿದಂತೆ ಸಾಮಾಜಿಕ ವನ ನಿರ್ಮಾಣ ಮಾಡುವುದು. ಹಸಿರುಗೊಬ್ಬರ ಬೇಡಿಕೆ ಪೂರೈಸುವುದು ಮತ್ತಿತ್ತರ ಧ್ಯೇಯೋದ್ದೇಶಗಳನ್ನು ಪೂರೈಸಲು ಅರಣ್ಯಗಳು ಬಹುಮುಖ್ಯ ಪಾತ್ರವಹಿಸುತ್ತದೆ. ಈ ಹಿನ್ನೆಲೆಯಲ್ಲಿ 2001 ರಿಂದ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ ಪ್ರಾರಂಭವಾಯಿತು. ಇದಕ್ಕೂ ಪೂರ್ವದಲ್ಲಿ ಜುಲೈ 21, 1997 ರಿಂದಲೇ ಮೈಸೂರನ್ನು ಕೇಂದ್ರವಾಗಿರಿಸಿಕೊಂಡು ಅಸ್ಥಿತ್ವಕ್ಕೆ ಬಂದಿತ್ತು. ಜಿಲ್ಲೆಯಲ್ಲಿ ಬಿ.ಆರ್.ಟಿ ವನ್ಯಜೀವಿ ವಿಭಾಗ ಕೊಳ್ಳೇಗಾಲ ಪ್ರಾದೇಶಿಕ ವಿಭಾಗ, ಕಾವೇರಿ ವನ್ಯಜೀವಿ ವಿಭಾಗ, ಕನಕಪುರ ಹಾಗೂ ಸಾಮಾಜಿಕ ಅರಣ್ಯ ವಿಭಾಗ ಕಂಡು ಬರುತ್ತವೆ. ಈ ವಿಭಾಗಗಳು ಎಂಟು ಉಪವಿಭಾಗಗಳು ಹಾಗೂ 20 ವಲಯಗಳ ಅಧಿಕಾರ ವ್ಯಾಪ್ತಿ ಹೊಂದಿ ಅರಣ್ಯ ಪ್ರದೇಶ ಸಂರಕ್ಷಣೆಯಲ್ಲಿ ತೊಡಗಿದ್ದಾರೆ.

ಈ ಅರಣ್ಯಗಳು ಪ್ರಮುಖವಾಗಿ ಬೆಲೆಬಾಳುವ ಶ್ರೀಗಂಧ, ಬೀಟೆ, ತೇಗ, ಹೊನ್ನೆ ಹಾಗೂ ಇತರೆ ಕಾಡುಜಾತಿಯ ಮರಗಳು ಹೇರಳವಾಗಿ ಲಭ್ಯವಿದೆ. ವನ್ಯ ಪ್ರಾಣಿಗಳಾದ ಕಾಡಾನೆಗಳು, ಕಾಡುಕೋಣಗಳು, ಚಿರತೆ, ಹುಲಿ, ಜಿಂಕೆ ಮತ್ತಿತರ ಪ್ರಾಣಿಗಳ ವಾಸ ಸ್ಥಾನವಾಗಿರುತ್ತದೆ. ಈ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಬಿಳಿಗಿರಿರಂಗನ ಬೆಟ್ಟ, ಕಾವೇರಿ ವನ್ಯಧಾಮ, ಬಂಡೀಪುರ ಅಭಯಾರಣ್ಯಗಳು, ಪ್ರವಾಸಿಗರ ನೆಚ್ಚಿನ ತಾಣವಾಗಿವೆ.

ಚಾಮರಾಜನಗರ ವ್ಯವಸಾಯ ಪ್ರಧಾನವಾದ ಜಿಲ್ಲೆ. ಇಲ್ಲಿ ಕಪ್ಪು ಮತ್ತು ಕೆಂಪು ಮಣ್ಣಿನ ಭೂಮಿ ಇದೆ. 2001 ರ ಜನಗಣತಿಯಂತೆ ಜಿಲ್ಲೆಯಲ್ಲಿ ಒಟ್ಟು 1,24,312 ಕೃಷಿ ಕೆಲಸಗಾರರು ಮತ್ತು 1,92,978 ಕೃಷಿ ಕಾರ್ಮಿಕರು ವಾಸಿಸುತ್ತಿದ್ದಾರೆ. ಸುವರ್ಣಾವತಿ ಮತ್ತು ಚಿಕ್ಕಹೊಳೆ, ಗುಂಡಾಲ್ ಜಲಾಶಯಗಳು ಕೃಷಿ ಭೂಮಿಗೆ ನೀರನ್ನು ದಣಿಸುತ್ತಿವೆ. ಕೆರೆಗಳು, ಕಾಲುವೆಗಳು, ಬಾವಿಗಳು ಹಾಗೂ ಮತ್ತಿತರ ಲಭ್ಯವಿರುವ ಜಲಸಂಪನ್ಮೂಲಗಳನ್ನು ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳಲಾಗುತ್ತಿದೆ. ಡಿ.ಎಂ.ನಂಜುಂಡಪ್ಪನವರ ವರದಿಯಲ್ಲಿ ಈ ಜಿಲ್ಲೆಯೂ ಅಪಾರ ಹಿಂದುಳಿದ ಪ್ರದೇಶದಲ್ಲಿ ಒಂದು ಎಂದು ದಾಖಲಿಸಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಜಿಲ್ಲೆಯ ಜನಸಂಖ್ಯೆಯಲ್ಲಿ ಶೇ.85 ರಷ್ಟು ಜನರು ಗ್ರಾಮೀಣ ಪ್ರದೇಶದವರಾಗಿದ್ದು, ಕೃಷಿಯು ಇವರ ಪ್ರಮುಖ ಕಸುಬಾಗಿರುತ್ತದೆ. ಜಿಲ್ಲೆಯ ಒಟ್ಟಾರೆ ಆದಾಯದಲ್ಲಿ ಕೃಷಿಯಿಂದ ಬರುವ ಆದಾಯವು ಪ್ರಮುಖವಾಗಿದ್ದು, ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಿರುತ್ತದೆ. ಹೆಚ್ಚಿನ ಕೃಷಿ ಉತ್ಪಾದನೆಗಾಗಿ ಕೃಷಿ ವಿಸ್ತರಣಾ ಚಟುವಟಿಕೆಗಳು, ರೈತ ಸಮುದಾಯಕ್ಕೆ ಹೊಸ ತಾಂತ್ರಿಕ ವಿಧಾನಗಳನ್ನು ಅಳವಡಿಸಿಕೊಳ್ಳಲು ಬೇಕಾಗುವಂತಹ ತರಭೇತಿಯನ್ನು ರೈತ ಸಂಪರ್ಕ ಕೇಂದ್ರಗಳು ನೀಡುತ್ತಿವೆ. ಇದಲ್ಲದೆ ಕೇಂದ್ರ ಪ್ರಾಯೋಜಿತ ಮತ್ತು ಕೇಂದ್ರೀಯ ಯೋಜನೆಗಳ ಮೂಲಕ ಇಲಾಖೆಯು ಹೊಸ ಹೊಸ ಯೋಜನೆಗಳನ್ನು ಕೃಷಿಯ ಸರ್ವಾಂಗೀಣ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸುತ್ತಿದೆ.

ಚಾಮರಾಜನಗರ ಜಿಲ್ಲೆಯು ದಕ್ಷಿಣ ಒಣಭೂಮಿ ವಲಯಕ್ಕೆ ಸೇರುತ್ತದೆ. ವಿವಿಧ ಹವಾಮಾನದ ಪ್ರಯುಕ್ತ ರಾಜ್ಯದಲ್ಲಿ ಎಲ್ಲಾ ತರಹದ ಏಕದಳ ಧ್ಯಾನ್ಯಗಳು, ದ್ವಿದಳ ಧಾನ್ಯಗಳು, ಎಣ್ಣೆ ಕಾಳುಗಳು ಹಾಗೂ ವಾಣಿಜ್ಯ ಬೆಳೆಗಳನ್ನು ವಿವಿಧ ಭಾಗಗಳಲ್ಲಿ ಬೆಳೆಯಲಾಗುತ್ತದೆ. ಜಿಲ್ಲೆಯಲ್ಲಿ ಬೆಳೆಗೆ ಉಪಯೋಗಿಸಲಾಗಿರುವ ಭೂಮಿಯ ವಿಸ್ತೀರ್ಣ ಮತ್ತಿತರ ವಿಷಯಗಳನ್ನು (ಗ್ರಾಮ, ಗೇಣಿ ಮತ್ತು ಹಕ್ಕು ಪತ್ರ)ಗಳಲ್ಲಿ

ನಮೂದಿಸುತ್ತಾರೆ. ಸರ್ವೇ ನಂಬರ್‌ಗಳ ಪ್ರಕಾರ ಆರ್.ಟಿ.ಸಿ (ಮೂಲ ಗೇಣಿ ಮತ್ತು ಹಕ್ಕು ಪತ್ರ) ಗಳಲ್ಲಿ ನಮೂದಿಸಿರುತ್ತಾರೆ. ಇವುಗಳ ಆಧಾರದಲ್ಲಿ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಕ್ರೋಢೀಕರಿಸಲಾಗುವುದು. ರಾಜ್ಯದಲ್ಲಿ ಬೆಳೆಯಲಾಗುವ ಬೆಳೆಗಳನ್ನು ಏಕಧಳ ಧಾನ್ಯಗಳು, ದ್ವಿದಳ ಧಾನ್ಯಗಳು, ಎಣ್ಣೆ ಕಾಳುಗಳು ಹಾಗೂ ವಾಣಿಜ್ಯ ಬೆಳಗಳಾಗಿ ವಿಂಗಡಿಸಲಾಗುವುದು. ಜಿಲ್ಲೆಯಲ್ಲಿ ರೈತರು ಹೊಸ ತಾಂತ್ರಿಕತೆಯನ್ನು ಅಳವಡಿಸುವಲ್ಲಿ ಮುಂದಾಳತ್ವ ವಹಿಸಿ ಮಾರುಕಟ್ಟೆ ವಿಶ್ಲೇಷಣೆಯ ಅನುಸಾರ ಬೆಳೆ ವೈವಿಧ್ಯತೆಯನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ಇಲ್ಲಿನ ಪ್ರಮುಖ ಆಹಾರ ಧಾನ್ಯಗಳೆಂದರೆ ಭತ್ತ, ಜೋಳ, ರಾಗಿ, ಸಾಮೆ, ನವಣೆ ದ್ವಿಧಳ ಧಾನ್ಯಗಳಾದ ತೊಗರಿ, ಉದ್ದು, ಹಲಸಂದೆ, ಅವರೆ, ಹುರುಳಿ, ಅರಿಶಿಣ, ಬಾಳೆ ಮುಂತಾದವುಗಳು ಎಣ್ಣೆ ಕಾಳು ಬೆಳೆಗಳಾದ ಎಳ್ಳು, ಹುಚ್ಚೆಳ್ಳು, ಸೊಯಾ, ಅವರೆ, ಹರಳು ಪ್ರಮುಖವಾಗಿರುತ್ತವೆ. ವಾಣಿಜ್ಯ ಬೆಳೆಗಳ ಪೈಕಿ ನೆಲಗಡಲೆ, ಸೂರ್ಯಕಾಂತಿ, ಕಬ್ಬು ಪ್ರಧಾನ ಬೆಳೆಗಳಾಗಿವೆ. 2006–07 ನೇ ಸಾಲಿನ ವಾರ್ಷಿಕ ಋತು ಮತ್ತು ಬೆಳೆ ವರದಿ ಪ್ರಕಾರ 2,01,695 ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ಬೆಳೆಗಳನ್ನು ಬೆಳೆಯಲಾಗಿದ್ದು. ಇದು ಒಟ್ಟು ಬೆಳೆ ವಿಸ್ತೀರ್ಣದ ಶೇ.87.23 ರಷ್ಟಾಗಿರುತ್ತದೆ.

ಚಾಮರಾಜನಗರ ಜಿಲ್ಲೆಯಲ್ಲಿ ಕೈಗಾರಿಕೆಯು ಮುಖ್ಯವಾಗಿ ಕೃಷಿ ಮತ್ತು ಅರಣ್ಯ ಸಂಪತ್ತನ್ನು ಅವಲಂಭಿಸಿದೆ. 2009–14 ರ ಕೈಗಾರಿಕಾ ನೀತಿಯನ್ವಯ ಚಾಮರಾಜನಗರ ತಾಲ್ಲೂಕು ವಲಯ–1 ರಲ್ಲಿದ್ದು ಕೈಗಾರಿಕೆಯಲ್ಲಿ ಅತ್ಯಂತ ಹಿಂದುಳಿದ ತಾಲೂಕಾಗಿದೆ. ಹಾಗೆಯೇ ಗುಂಡ್ಲುಪೇಟೆ ಹಾಗೂ ಕೊಳ್ಳೇಗಾಲ ತಾಲ್ಲೂಕಗಳ ವಲಯ–2 ರ ವ್ಯಾಪ್ತಿಗೆ ಸೇರಿದ್ದು, ಕೈಗಾರಿಕೆಯಲ್ಲಿ ಅತೀ ಹಿಂದುಳಿದ ತಾಲೂಕಾಗಿದೆ. ಯಳಂದೂರು ತಾಲೂಕು ವಲಯ–3 ರ ವ್ಯಾಪ್ತಿಗೆ ಸೇರಿ ಕೈಗಾರಿಕೆಯಲ್ಲಿ ಹಿಂದುಳಿದ ತಾಲೂಕುಗಳ ವ್ಯಾಪ್ತಿಗೊಳಪಟ್ಟಿದೆ.

ಕೈಗಾರಿಕಾ ಬೆಳವಣಿಗೆಗೆ ಪೂರಕವಾಗುವ ಖನಿಜಗಳು ಜಿಲ್ಲೆಯಲ್ಲಿ ಸಾಧಾರಣ ಪ್ರಮಾಣದಲ್ಲಿ ದೊರಕುತ್ತಿದ್ದು. ಕಬ್ಬಿಣದ ಅದಿರು, ತಾಮ್ರ, ಗ್ರಾನೈಟ್ ಮತ್ತು ಸಿಲ್ಲಮನೈಟ್. ಕಪ್ಪುಗ್ರಾನೈಟ್, ಕಟ್ಟಡದ ಕಲ್ಲು, ಸುಣ್ಣದ ಕಲ್ಲು, ಮರಳು, ಮ್ಯಾಗ್ನಸೈಟ್, ಕ್ವಾರ್ಟ್ಸ್ ಮುಂತಾದವು ಲಭ್ಯವಿದೆ. ಜಿಲ್ಲೆಯು ವಿಶಾಲವಾದ ಅರಣ್ಯ ಪ್ರದೇಶ ಹೊಂದಿದ್ದು, ಹೆಚ್ಚು ಬೆಲೆ ಬಾಳುವ ಶ್ರೀಗಂಧ, ತೇಗ, ಹೊನ್ನೆ, ಮತ್ತಿ ಮೊದಲಾದ ವನರಾಶಿಯಿಂದ ಕೂಡಿದೆ. ಇವು ಜಿಲ್ಲೆಯಲ್ಲಿ ಮರಕುಯ್ಯುವ ಮಿಲ್ಲುಗಳ ಸ್ಥಾಪನೆಗೆ ಗುಡಿಗಾರರಿಗೆ, ಪೀಠೋಪಕರಣ ತಯಾರಿಕೆಗೆ, ಗೃಹ ನಿರ್ಮಾಣೋಪಾಯೋಗಿ ಸರಕುಗಳಾದ ಕಿಟಕಿ, ಬಾಗಿಲುಗಳಿಗೆ ಬೇಕಾಗುವ ಮರ ಮುಟ್ಟುಗಳನ್ನೊದಗಿಸುವುದರ ಮೂಲಕ ಜಿಲ್ಲಾ ಕೈಗಾರಿಕಾ ಬೆಳವಣಿಗೆಗೆ ಪೂರಕವಾಗಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಕರ್ನಾಟಕ ಸಣ್ಣ ಕೈಗಾರಿಕಾಭಿವೃದ್ಧಿ ನಿಗಮಗಳು ಜಿಲ್ಲೆಯ ಕೊಳ್ಳೇಗಾಲ, ಚಾಮರಾಜನಗರದ ಬದನಗುಪ್ಪೆ, ಸತ್ಯಗಾಲ ಮತ್ತು ಕುಂತೂರುಗಳಲ್ಲಿ ಕೈಗಾರಿಕಾ ಕ್ಷೇತ್ರಗಳನ್ನು ನಿರ್ಮಿಸಿ ಕೈಗಾರಿಕೋದ್ಯಮಿಗಳಿಗೆ ಒದಗಿಸಿವೆ. ಜಿಲ್ಲೆಯು ತಮಿಳುನಾಡು, ಕೇರಳ, ನೆರೆಹೊರೆಯ ಮೈಸೂರು, ಮಂಡ್ಯ ಮತ್ತು ಬೆಂಗಳೂರು ಜಿಲ್ಲೆಗಳಿಂದ ಸುತ್ತುವರಿಯಲ್ಪಟ್ಟಿರುವುದರಿಂದ ಉತ್ತಮ ಮಾರುಕಟ್ಟೆ ಸೌಲಭ್ಯವನ್ನು ಹೊಂದಿದೆ. ಜಿಲ್ಲೆಯ ಕೃಷಿ ಆಧಾರಿತ ಕೈಗಾರಿಕೆಗಳಲ್ಲಿ ರೇಷ್ಮೆ ಪ್ರಧಾನವಾಗಿದ್ದು, ರಾಜ್ಯದ ಸಿಲ್ಕ್ ಬೋರ್ಡ್ ನೆರವಿನೊಂದಿಗೆ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಾರುಕಟ್ಟೆಯ ಸೌಲಭ್ಯವನ್ನು ಪಡೆದುಕೊಂಡಿದೆ. ಜಿಲ್ಲೆಯಲ್ಲಿ ಕೃಷಿ ಮತ್ತು ಅರಣ್ಯ ಆಧಾರಿತ ಕೈಗಾರಿಕೆಗಳ

ಬೆಳವಣಿಗೆಗೆ ವಿಫುಲ ಅವಕಾಶವಿದ್ದರೂ ದಕ್ಷ ಉದ್ದಿಮೆದಾರರ ಕೊರತೆಯಿಂದಾಗಿ ಕೈಗಾರಿಕಾ ಬೆಳವಣಿಗೆಯಲ್ಲಿ ಕುಂದುಂಟಾಗಿದೆ.

ಕೆಲವು ಕೈಗಾರಿಕೆಗಳು ಜಿಲ್ಲೆಯಲ್ಲಿ ವಂಶ ಪಾರಂಪರ್ಯವಾಗಿದ್ದು, ಬಹಳ ಹಿಂದಿನಿಂದಲೂ ಮುಂದುವರಿದುಕೊಂಡು ಬಂದಿವೆ. ಕುಂಬಾರಿಕೆ, ಕಮ್ಮಾರಿಕೆ, ಗಾಣಗಳಿಂದ ಎಣ್ಣೆ ತೆಗೆಯುವುದು ಚರ್ಮೋದ್ಯಮ, ಬಿದಿರು, ಮತ್ತು ಬುಟ್ಟಿ ಹೆಣೆಯುವುದು. ಇವು ಬಹಳ ಹಿಂದಿನಿಂದಲೂ ವಂಶಪಾರಂಪರ್ಯ ಉದ್ಯಮವಾಗಿದ್ದು, ಕೈಗಾರಿಕ ಅಭಿವೃದ್ಧಿಪಡಿಸುವುದಕ್ಕೆ ಸಹಕಾರಿಯಾಗಿದೆ. ಸ್ವಾತಂತ್ರ್ಯಕ್ಕೂ ಪೂರ್ವದಲ್ಲಿ ಧರ್ಮಪುರಂ ಮತ್ತು ಕೊಯಮತ್ತೂರು ರೇಷ್ಮೇ ಮಿಲ್ಲುಗಳಿಗೆ ಕೊಳ್ಳೇಗಾಲವೊಂದರಿಂದಲೇ ರೇಷ್ಮೇ ಪೂರೈಕೆಯಾಗುತ್ತಿತ್ತು ಎಂಬುದನ್ನು ಗಮನಿಸಬಹುದಾಗಿದೆ.

ಪರಾಮರ್ಶನ ಗ್ರಂಥಗಳು

- *ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು–ಸಂಪುಟ 9* (1998). ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಕರ್ನಾಟಕ ಸರ್ಕಾರ.
- *ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು–ಸಂಪುಟ 10.* (1998). ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಕರ್ನಾಟಕ ಸರ್ಕಾರ.
- ಕುಮಾರಸ್ವಾಮಿ.ಸಿ. *ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ವಾಣಿಜ್ಯ ಯೋಜನೆಗಳ ವಿಮರ್ಶಾತ್ಮಕ ಅಧ್ಯಯನ* (ಚಾಮರಾಜನಗರ ಜಿಲ್ಲೆಯನ್ನು ಅನುಲಕ್ಷಿಸಿ. 2005–2015). ಅಪ್ರಕಟಿತ ಪ್ರೌಢಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
- ಕೃಷ್ಣಯ್ಯ ಗೌಡ ಎಚ್.ಆರ್. (2011). *ಅಭಿವೃದ್ಧಿ ಅರ್ಥಶಾಸ್ತ್ರ.* ವಿದ್ಯಾನಿಧಿ ಪ್ರಕಾಶನ. ಗದಗ.
- *ಕರ್ನಾಟಕ ಅಂಕಿಅಂಶಗಳ ನೋಟ 2009–2010.* ಆರ್ಥಿಕ ಮತ್ತು ಸೂಚ್ಯಾಂಕ ನಿದೇಶನಾಲಯ, ಬೆಂಗಳೂರು.
- *ಕೈಗಾರಿಕಾ ವಿಕಾಸ ಯೋಜನೆಯ ಮೌಲ್ಯಮಾಪನ.* (2016). ಕನಾಟಕ ಮೌಲ್ಯಮಾಪನ ಪ್ರಾಧಿಕಾರ ಮತ್ತು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ (ಕರ್ನಾಟಕ ಸರ್ಕಾರ 21ನೇ ಬಾಹ್ಯ ಮೌಲ್ಯಮಾಪನ ವರದಿ.
- *ಚಾಮರಾಜನಗರ ಜಿಲ್ಲೆಯ ಗ್ಯಾಸೆಟಿಯರ್.* (2010). ಕರ್ನಾಟಕ ಗ್ಯಾಜೆಟಿಯರ್ ಇಲಾಖೆ.
- *ಚಾಮರಾಜನಗರ ಜಿಲ್ಲೆ ಮಾನವ ಅಭಿವೃದ್ಧಿ ವರದಿ.* (2014). ಚಾಮರಾಜನಗರ ಜಿಲ್ಲಾ ಪಂಚಾಯತ್. ಚಾಮರಾಜನಗರ.
- ಮಂಜುಳ.ಎಸ್. (2021). ಚಾಮರಾಜನಗರ ತಾಲೂಕಿನ ಗ್ರಾಮದೇವತೆಗಳು. ಮೈ.ವಿ.ವಿ.
- *ಚಾಮರಾಜನಗರ ಜಿಲ್ಲಾ ಅಂಕಿಅಂಶಗಳ ನೋಟ 2014–2015.* (2015). ಕರ್ನಾಟಕ ಸರ್ಕಾರ.

- ಚಾಮರಾಜನಗರ ಸುತ್ತಿನ ಲಂಬಾಣಿ ಸಂಸ್ಕೃತಿ–ಡಾ.ಮಹದೇವಿಬಾಯಿ–2017
- ಅಂಶಿ ಪ್ರಸನ್ನಕುಮಾರ್. (2017). *ಮೈಸೂರು ಮತ್ತು ಚಾಮರಾಜನಗರ ರಾಜಕೀಯ ಇತಿಹಾಸ.*
- Girish, B., Surendran, J., Vishma, B. K., Jyothika, V., & Tahreem, S. (2023). Study on awareness and utilization of Ayushman Bharat Arogya Karnataka scheme in Chamarajanagar taluk: a cross-sectional study. *International Journal of Research in Medical Sciences*, *11*(2), 544–550. https://doi.org/10.18203/2320-6012.ijrms20230161
- Manjunatha B R (2017). Socio-Economic status of Jenukuruba Tribal Women: A case study of Chamarajanagara District, Karnataka. *Anthropology Open Access*, *1*(01). https://doi.org/10.29011/2688-8688/100001
- Ohlan, R. (2012). Pattern of regional disparities in socio-economic development in India: District Level analysis. *Social Indicators Research*, *114*(3), 841–873. https://doi.org/10.1007/s11205-012-0176-8